





ನ್ಯೂಟನ್ನನ ಅಧ್ಯಯನ ಕೊಠಡಿ



ತಮ್ಮ ಪುಸ್ತಕವನ್ನು ಹಿಡಿದಿರುವ 'ನ್ಯೂಟನ್ ಮನೆ'ಯ ಸಿಬ್ಬಂದಿಯ ಜೊತೆ ಲೇಖಕ ಸಿಡ್ನಿ ಶ್ರೀನಿವಾಸ್

ಹೇಳತೀರದು. "ಪುಸ್ತಕವನ್ನು ನಮಗೆ ಕೊಡಲು ಬಂದಿದ್ದೀರಾ? ಇದು ನಿಜವಾಗಿಯೂ ವಿಶೇಷ" ಎಂದವಳೇ ಅಲ್ಲಿಯ ಎಲ್ಲ ಸಿಬ್ಬಂದಿಯನ್ನೂ ಅಲ್ಲಿಗೆ ಬರುವಂತೆ ಕರೆದಳು. ಇದ್ದ ನಾಕಾರು ಜನ ಬಂದು ಪುಸ್ತಕವನ್ನು ಕಂಡು, ಮೆಚ್ಚಿ, ಅದರ ಪುಟಗಳನ್ನು ತಿರುವಿಹಾಕಿ ಸಂತೋಷಪಟ್ಟರು.

ಆಗ ನಾನು ಹೇಳಿದೆ, "ಕೆಲವು ವರ್ಷಗಳ ಹಿಂದೆ ನಾನು ನನ್ನ ಕನ್ನಡ ಪುಸ್ತಕವನ್ನು ಇಲ್ಲಿಗೆ ನೀಡಿದ್ದೆ." ನನ್ನ ಮಾತನ್ನು ಕೇಳಿಸಿಕೊಂಡ ಓರ್ವ ಸಿಬ್ಬಂದಿ "ಹಾಗೋ" ಎಂದವನೇ, "ಸ್ವಲ್ಪ ನನ್ನ ಜೊತೆ ಬನ್ನಿ" ಎಂದು ಮನೆಯೊಳಗೆ ಕರೆದುಕೊಂಡು ಹೋದರು. ಮಹಡಿ ಮೆಟ್ಟಿಲುಗಳನ್ನು ಹತ್ತಿ ಒಂದು ವಿಶಾಲವಾದ ಕೊಠಡಿಗೆ ಕೊಂಡೊಯ್ದು ಅಲ್ಲಿದ್ದ ಒಂದು ಒಂದು ಮೇಜನ್ನು ತೋರಿಸಿದರು. "ಏನಿರಬಹುದು" ಎಂದು ನಾನು ಕುತೂಹಲದಿಂದ ಅತ್ತ ಹೋದೆ. ನೋಡಿದರೆ ಅಲ್ಲಿಯ ಬಲತುದಿಯಲ್ಲಿ ಇದ್ದದ್ದು ನನ್ನ ಕನ್ನಡ ಪುಸ್ತಕ! ಅದರ ಅಡಿಯಲ್ಲಿ ಟಿಪ್ಪಣಿ ಬೇರೆ!. ಅದನ್ನು ಕಾಪಾಡಲು ಮೇಲೆ ಗಾಜಿನ ಕವಚ. ಅವಾಕ್ಕಾದೆ ನಾನು. ಯಾವುದೇ ಲೇಖಕನಿಗೆ ಸಿಗಬಹುದಾದ ಅತ್ಯುತ್ತಮ ಪುರಸ್ಕಾರ ಇದು. ಇಂದಿಗೂ ನೆನೆಸಿಕೊಂಡರೆ ನನಗೆ ಆಶ್ಚರ್ಯವಾಗುತ್ತದೆ. "ನನ್ನ ಪುಸ್ತಕ ನ್ಯೂಟನ್ನನ ಮನೆಯಲ್ಲಿದೆಯೇ?"

ನಮ್ಮಿಬ್ಬರನ್ನೂ ಮನೆಯ ಪ್ರತಿ ಕೋಣೆಗೂ ಕರೆದೊಯ್ಯಲಾಯಿತು. ಫೋಟೊ ತೆಗೆಯಲು ಅನುಮತಿಯನ್ನು ನೀಡಲಾಯಿತು. ಆದರೆ ಪ್ರಕಟಿಸುವಂತಿಲ್ಲ.

ಮನೆಯ ಕೆಳಭಾಗದಲ್ಲಿ ಅಂತಹ ಅಚ್ಚರಿ ಏನಿಲ್ಲ. ವಾಸಕ್ಕೆ ಬೇಕಾದ ಅಡುಗೆ ಮನೆ, ಇತ್ಯಾದಿ. ಅಂದಿನ ದಿನಗಳಲ್ಲಿ ಉಪಯೋಗಿಸುತ್ತಿದ್ದ ಪಾತ್ರೆ, ಪರಿಕರಗಳನ್ನು ನೋಡಬಹುದು. ಮಹಡಿಯ ಭಾಗ ವಿಜ್ಞಾನಕ್ಕೆ ಮೀಸಲು ಎನ್ನಬಹುದು. ಇಲ್ಲಿ